ಕೈಯಿ ಹಾಳಾಗ, ನೀ ಸತ್ತೋಗ' ಎಂದು ಅಜ್ಜಿ ಲಟಿಕೆಮುರಿದಳು. 'ಗಂಡನ್ನ ಬೈದಿದ್ದಕ್ಕೆ ಮಹಾನರಕಕ್ಕೆ ಹೋಗ್ತೀಯ ರಂಡೆ. ನಾನು ಸಾಯ್ಬೇಕಂತೆ, ನಾನ್ಯಾಕೆ ಸಾಯ್ಲಿ. ಆಯುಷ್ಯ ತೀರಿದ್ರೆ ಎಲ್ಲಾರೂ ಸಾಯ್ತಾರೆ. ನೀನು ಮಾಡಿದ ಕರ್ಮಾನ ಅನುಭವಿಸ್ಬಿ ಅಷ್ಟೆ. ಹುಳಬಿದ್ದು ಸಾಯ್ತೀಯ ಮುಂಡೆ' ಎಂದ ಬಿಳಿಅಜ್ಜ.

ಅಷ್ಟರಲ್ಲಿ ಕರಿಅಜ್ಜ ಕೆಮ್ಮಿದ್ದು ಕೇಳಿಸಿ ಇಬ್ಬರೂ ಸುಮ್ಮನಾದರು. ಕರಿಅಜ್ಜ ಸ್ನಾನಕ್ಕೆ ಹೋದಾಗ ಬಿಳಿಅಜ್ಜ ಊಟ ಮುಗಿಸಿ ಹಿತ್ತಲಿಗೆ ಹೋದ. ಅವನ ಹಣೆಯ ಮೇಲೆ ಕುಂಕುಮ ದೊಡ್ಡದಾಗಿತ್ತು. ಕೈಯಲ್ಲೊಂದು ಕುಡುಗೋಲಿತ್ತು. ಹಿತ್ತಲಿನ ಬಲಗಡೆ ಮೂಲೆಯಲ್ಲಿ ಹಲಸಿನ ಮರಕ್ಕೆ ದೊಡ್ಡದೊಂದು ಬಳ್ಳಿ ಹಬ್ಬಿತ್ತು. ಆ ಬಳ್ಳಿ ಹಲಸಿನ ಮರದ ತೊಗಟೆಯನ್ನು ಕೊರೆದು, ಮರಕ್ಕೆ ಸುತ್ತಿ ಸುತ್ತಿ ಬೆಳೆದಿತ್ತು. ಹಲಸಿನಮರದ ಸಾರವನ್ನೆಲ್ಲ ಹಿಂಡಿ ಹೀರಿದ ಆ ಹೆಬ್ಬಾವು ಬಳ್ಳಿ, ಬೆಳೆಯುತ್ತ ಹೋದ ಹಾಗೆ ಹಲಸಿನ ಮರದಕಾಯಿಗಳು ಪೀಚುಗಳಾಗಿದ್ದವು. ಇಷ್ಟು ದಿನ ಅದನ್ನು ಬಿಟ್ಟಿರಬಾರದಾಗಿತ್ತು ಎನ್ನಿಸಿ, ಬಿಳಿಅಜ್ಜ ಅದನ್ನು ಕಡಿಯುತ್ತ ಹೋದ. ಅದನ್ನು ಕಡಿಯುತ್ತಿದ್ದ ಹಾಗೆ ಅವನಿಗೆ ಆವೇಶ ಬಂದಹಾಗಿತ್ತು. ಕಡಿದು ಮುಗಿಸಿದಾಗ ಏನೋ ಒಂದು ರೀತಿಯ ನಮ್ಮದಿ ಸಿಕ್ಕ ಹಾಗಾಗಿತ್ತು.

ಬಿಳಿಅಜ್ಜ ಆ ದಿನ ಸಂಜೆ ಪೂಜೆಗೆ ಹೋದಾಗ ಕುಂಕುಮಾರ್ಚನೆ ಮಾಡಿದಾಗ, ಮೈತುಂಬ ಕೆಂಪು ಬಡಿದುಕೊಂಡ ಅಮ್ಮನವರ ಮೂರ್ತಿ ಕಣ್ಣಿನಲ್ಲಿ ನಿಂತಿತ್ತು. ದೇವಸ್ಥಾನದಿಂದ ಮನೆಯ ಕಡೆ ಹೊರಟಾಗ ಧೋ ಧೋ ಎಂದು ಮಳೆ ಸುರಿಯುತ್ತಿತ್ತು. ವಾಲೆಗರಿ ಛತ್ರಿಯನ್ನು ಹಿಡಿದು ಬಿಳಿಅಜ್ಜ ಮನೆಗೆ ಬಂದು, ಕಿರುಜಗಲಿಯನ್ನು ದಾಟುತ್ತಿದ್ದಾಗ ಕರಿಅಜ್ಜನಿಗೆ ಇದ್ದಕ್ಕಿದ್ದ ಹಾಗೆ ನಗುಬಂತು. ಅವನಿಗೆ ಗೌಡ್ರು ಸಣ್ಣಿ ಹೇಳಿದ ಮಾತುಗಳು ನೆನಪಾದವು. 'ನನ್ನ ಕೊಲ್ತಾನಂತೆ. ನಾಯಿ ಹೊಡಿಯೋ ಕೋಲು ಇದ್ದ ಹಾಗಿದಾನೆ, ಕಡ್ಡಿ ಮುರ್ದಹಾಗೆ ಮುರ್ದುಹಾಕಿ ಬಿಟ್ಟೇನು' ಎಂದುಕೊಂಡ ಕರಿಅಜ್ಜನಿಗೆ ಬಿಳಿಅಜ್ಜ ತಮಾಷೆಯ ವಸ್ತುವಾಗಿ ಕಾಣಿಸತೊಡಗಿದ. ಕರಿಅಜ್ಜನ ನಗು ಜಗುಲಿಯನ್ನು ದಾಟಿ ಪಡಸಾಲೆಗೂ ಅಂಗಳಕ್ಕೂ ಹರಡಿತು.

ಹಿತ್ತಲಿನಲ್ಲಿ ಊರಿನ ನೀರು ದಡದಡನೆ ಜಲಪಾತದ ಹಾಗೆ ಸುರಿಯುತ್ತಿತ್ತು. ಅಕ್ಕಪಕ್ಕದ ನೆಲಕುಸಿದು ಧೊಪ್ ಧೊಪ್ಪೆಂದು ಸದ್ದು ಕೇಳುತ್ತಿತ್ತು. ಇದ್ದಕ್ಕಿದ್ದ ಹಾಗೆ ಆ ಪ್ರಪಾತಕ್ಕೆ ಮರವೊಂದು ಉರುಳಿದ ಸದ್ದು ಕೇಳಿಸಿತು. ಅಜ್ಜಿ 'ಆ ಸಂಪಿಗೆ ಮರ ಬಿತ್ತೂಂತ ಕಾಣುತ್ತೆ' ಅಂದಳು. ಕರಿಅಜ್ಜನ ನಗುವಿನಲ್ಲಿ ಅಜ್ಜಿ ಹೇಳಿದ್ದೂ ಕೇಳಿಸಲಿಲ್ಲ. ಬಿಳಿಅಜ್ಜ ಪಡಸಾಲೆಯಿಂದ ನಡುಮನೆಗೆ ಹೋಗುವ ಬಾಗಿಲಲ್ಲಿ ನಿಂತಿದ್ದ. ಕರಿಅಜ್ಜನ ನಗು ಬೆಳೆದ ಹಾಗೆ ಅವನ ತಾಳ್ಮೆಯೂ ಮೀರಿತು. ದೇವಸ್ಥಾನದಿಂದ ತಂದ ಎಣ್ಣೆಯೆಲ್ಲಾ ಅವನ ಕೈಯಲ್ಲಿತ್ತು. ಕೊನೆಗೆ ಬಿಳಿಅಜ್ಜ ಎಣ್ಣೆಥಾಲಿಯನ್ನು ಕರಿಅಜ್ಜನ ಮಂಚದ ಕಡೆಗೆ ಎಸೆದ. ಕರಿಅಜ್ಜನ ಸೊಳ್ಳೆಪರದೆ ಮತ್ತು ಹಾಸಿಗೆ ಎಣ್ಣೆಯಾಗಿತ್ತು. ಹೊರಗೆ ಧಾರಾಕಾರವಾಗಿ ಮಳೆ ಸುರಿಯುತ್ತಲೇ ಇತ್ತು. ಹಿತ್ತಿಲಿನಲ್ಲಿ ಜಲಪಾತದ ಸದ್ದು ಕೇಳುತ್ತಿತ್ತು. ಮಿಂಚು ಗುಡುಗಿನ ಮಳೆಯ ಗಾಳಿಗೆ ಲಾಟೀನು ಬಗ್ ಎನ್ನುತ್ತಿತ್ತು. ಕರಿಅಜ್ಜ ಸರ್ರನೆ ಪಡಸಾಲೆಗೆ ಏರಿದ. ಅವನೊಂದು ಪಾಣಿಪಂಚೆ ಮಾತ್ರ ಉಟ್ಟಿದ್ದ. ಷರಟು ಬನಿಯನ್ನು ಏನನ್ನೂ ಹಾಕಿಕೊಂಡಿರಲಿಲ್ಲ. ಚಂದ್ರೂಗೆ ಮಾತುಗಳೆ ಹೊರಡಲಿಲ್ಲ. ಕರಿಅಜ್ಜ ಬಿಳಿಅಜ್ಜನ ಕುತ್ತಿಗೆಗೆ ಕೈಹಾಕುವ ಹೊತ್ತಿಗೆ ಬಿಳಿಅಜ್ಜ ಕೆಳಕ್ಕೆ ಕುಕ್ಕರಿಸಿದ. ಅವನನ್ನು ಹಿಡಿಯಲು ಬಗ್ಗಿದ ಕರಿಅಜ್ಜನ ಎಡಿಗೆ ಎರಡೂಕಾಲು ಕೊಟ್ಟು ಕರಿಅಜ್ಜ ತತ್ತರಿಸುವಂತೆ, ತನ್ನ ಬಲವನ್ನೆಲ್ಲ ಬಿಟ್ಟು ನೂಕಿದ. ಎಳೆದ ಸ್ಪ್ರಿಂಗು ಮತ್ತೆ ಸುತ್ತುವಂತೆ,